ತಾಃ- 17.11.2020 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಯಿತು.

**ಪಾಟೀ ಸವಾಲು 1ನೇ ಆರೋಪಿ ಪರ ಶ್ರೀ ಎಂ ಬಿ ಎಸ್ ವಕೀಲರಿಂದಃ-**

ಪ್ರತೀ ದಿನ ಠಾಣೆಗಳಲ್ಲಿ ರೋಲ್ ಕಾಲ್ ಮಾಡಿ ಬೀಟ್‌ಗಳಿಗೆ ಸಿಬ್ಬಂದಿಯ ಲಭ್ಯತೆಯ ಮೇಲೆ ಸಿಬ್ಬಂದಿಯನ್ನು ನೇಮನೋಕಿ ಮಾಡಲಾಗುತ್ತದೆ. ಖಾನಿಮಠದ ಕ್ರಾಸ್ ಇದು ದೊಡ್ಡಬೆಳವಂಗಲ ಪೋಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಬರುತ್ತದೆ. ಖಾನಿಮಠದ ಕ್ರಾಸ್ ಎಷ್ಟನೇ ಬೀಟ್‌ನಲ್ಲಿ ಬರುತ್ತದೆ ಎನ್ನುವುದು ಈಗ ನನಗೆ ನೆನಪಿಲ್ಲ. ದಿನಾಂಕ 24.02.2014 ರಂದು ಖಾನಿಮಠದ ಕ್ರಾಸ್ ಬರುವ ಬೀಟ್‌ಗೆ ಸಿಬ್ಬಂದಿಯನ್ನು ನೇಮಕ ಮಾಡಿರಲಿಲ್ಲ. ಪಿಸಿ ಬಕಲ್ ನಂ. 1376 ಹುಸೇನ್ ಸಾಬ್ ರವರನ್ನು ದಿನಾಂಕ 24.02.2014 ರಂದು ಯಾವ ಬೀಟ್‌ಗೆ ನೇಮಕ ಮಾಡಲಾಗಿತ್ತು ಎಂದರೆ ಸಾಕ್ಷಿಯು ಓವರ್ ಆಲ್ ಪೆಟ್ರೋಲಿಂಗ್ (ಗಸ್ತು) ಕರ್ತವ್ಯಕ್ಕೆ ನೇಮಕ ಮಾಡಲಾಗಿತ್ತು, ಇದಕ್ಕೆ ಸಂಬಂಧಪಟ್ಟಂತೆ ಪ್ರತ್ಯೇಕ ದಾಖಲಾತಿಯನ್ನು ತನಿಖಾಧಿಕಾರಿಗಳಿಗೆ ಪೂರೈಸಿಲ್ಲ. ಸಾಕ್ಷಿ ಸ್ವಇಚ್ಛೆಯಿಂದ ಎಸ್ ಹೆಚ್ ಡಿ ಯಲ್ಲಿ ನಮೂದಿಸಲಾಗಿರುತ್ತದೆ ಎಂದು ಹೇಳುತ್ತಾರೆ. ದಿನಾಂಕ 24.02.2014 ರಂದು ಪಿಸಿ ಬಕಲ್ ನಂ. 1376 ಹುಸೇನ್ ಸಾಬ್ ರವರನ್ನು ಯಾವುದೇ ಕರ್ತವ್ಯಕ್ಕೆ ನೇಮಿಸಿರಲಿಲ್ಲ ಎಂದರೆ ಸರಿಯಲ್ಲ.

ನಿಪಿ-31 ರಲ್ಲಿ ಕಾಣಿಸಿದಂತೆ ಪಿಸಿ ಬಕಲ್ ನಂ. 1376 ಹುಸೇನ್ ಸಾಬ್ ಈತನು ನನ್ನ ಮುಂದೆ ವಾಸ್ತವಿಕವಾಗಿ ಯಾವುದೇ ವರದಿ ಕೊಟ್ಟಿಲ್ಲ ಹಾಗೂ ಯಾವುದೇ ಆರೋಪಿಗಳನ್ನು ಮಾಲುಗಳ ಸಮೇತ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ದ್ವಿಚಕ್ರ ವಾಹನಗಳಲ್ಲಿ ಟೂಲ್ಸ್‌ಗಳು ಇರುತ್ತವೆ ಎಂದರೆ ಸರಿ.

ನಿಪಿ-24 ಫೋಟೋದಲ್ಲಿ ಕಂಡು ಬರುವ ಮುದ್ದೆ ಮಾಲುಗಳು ಸದರಿ ಸ್ಕೂಟರ್‌ಗೆ ಸಂಬಂಧಪಟ್ಟವುಗಳು ಎಂದರೆ ಸರಿಯಲ್ಲ. ನಿಪಿ-24 ಫೋಟೋದಲ್ಲಿ ಚಾಕು ಕಂಡು ಬರುವುದಿಲ್ಲ ಎಂದರೆ ಸರಿ. ನಿಪಿ-24 ಫೋಟೋದಲ್ಲಿ ಕಂಡು ಬರುವ ಮುದ್ದೆ ಮಾಲುಗಳು ಸಾಮಾನ್ಯವಾಗಿ ಮಾರ್ಕೆಟ್‌ನಲ್ಲಿ ದೊರೆಯುತ್ತವೆ ಎಂದರೆ ಸರಿ.

ನಿಪಿ-33 ಮಹಜರ್‌ನ ಪಂಚ ಸಾಕ್ಷೀದಾರರಿಗೆ ಮುಂಚಿತ ಲಿಖಿತ ನೋಟೀಸ್ ಕೊಟ್ಟಿರಲಿಲ್ಲ.

ನಿಪಿ-33 ಮಹಜರ್ ಯಾರು ಬರೆದಿರುವರು ಎನ್ನುವುದರ ಕುರಿತು ಹಿಂಬರಹ ಹಾಗೂ ಸಹಿ ಇರುವುದಿಲ್ಲ ಎಂರದೆ ಸರಿ. ನಿಪಿ-33 ರ ಪಂಚ ಸಾಕ್ಷೀದಾರರು ಠಾಣೆಯ ಖಾಯಂ ಪಂಚ ಸಾಕ್ಷೀದಾರರು ಎಂದರೆ ಸರಿಯಲ್ಲ.

ನಿಪಿ-22 ರಿಂದ 24 ಫೋಟೋಗಳನ್ನು ತೆಗೆದ ವ್ಯಕ್ತಿಯನ್ನು ಈ ಪ್ರಕರಣದಲ್ಲಿ ಸಾಕ್ಷೀದಾರನನ್ನಾಗಿ ಮಾಡಿಲ್ಲ. ನಿಪಿ-22 ರಿಂದ 24 ಫೋಟೋಗಳಿಗೆ ಸಂಬಂಧಿಸಿದಂತೆ ಸೀಡಿ ಆಗಲೀ ಪೋಟೋ ಆಗಲೀ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಿಪಿ- 22 ರಿಂದ 24 ಫೋಟೋಗಳಲ್ಲಿ ಕಂಡು ಬರುವ ಮುದ್ದೆ ಮಾಲುಗಳು ಯಾವ ಪ್ರಕರಣದಲ್ಲಿ ಮತ್ತು ಯಾವಾಗ ಮತ್ತು ಯಾರಿಂದ ವಶಪಡಿಸಿಕೊಳ್ಳಲಾಗಿದೆ ಅನ್ನುವುದರ ಕುರಿತು ಕಂಡು ಬರುವುದಿಲ್ಲ ಎಂದರೆ ಸರಿ. ನಿಪಿ- 22 ರಿಂದ 24 ಫೋಟೋಗಳಲ್ಲಿ ಮಹಜರ್ ಸಾಕ್ಷೀದಾರರ ಸಹಿ ಇರುವುದಿಲ್ಲ. ನಿಪಿ- 22 ರಿಂದ 24 ಫೋಟೋಗಳನ್ನು ತೆಗೆಯಿಸುವಾಗ ಸದರಿ ಮುದ್ದೆ ಮಾಲುಗಳನ್ನು ಹಾಜರುಪಡಿಸಿದ ಸಿಬ್ಬಂದಿ ಹುಸೇನ್ ಸಾಬ್ ಹಾಗೂ ಇನ್ನೊಬ್ಬ ಸಿಬ್ಬಂದಿ ಬಲರಾಮ್ ಇವರುಗಳನ್ನು ನಿಲ್ಲಿಸಿ ಫೋಟೋ ತೆಗೆಯಿಸುವಲ್ಲಿ ನನಗೆ ಯಾವುದೇ ತೊಂದರೆ ಇರಲಿಲ್ಲ. ಕೆಎ 05 ಆರ್ 3975 ಸ್ಕೂಟರ್‌ನ ಮಾಲೀಕರು ಯಾರು ಅನ್ನುವುದರ ಕುರಿತು ನಾನು ಆರ್ ಸಿ ದಾಖಲೆ ವಗೈರೆ ಹಾಜರುಪಡಿಡಿಸಿಲ್ಲ.

ಸಾಕ್ಷಿ ಸ್ವಇಚ್ಚೆಯಿಂದ ಸದರಿ ಸ್ಕೂಟರ್‌ನ ಮಾಲೀಕರು ಯಾರು ಎನ್ನುವುದರ ಕುರಿತು ಪತ್ತೆ ಆಗದಿದ್ದ ಕಾರಣ ದಾಖಲಾತಿ ಹಾಜರುಪಡಿಸಿಲ್ಲ ಅಂತ ಹೇಳುತ್ತಾರೆ. ಕೆಎ 05 ಆರ್ 3975 ಸ್ಕೂಟರ್‌ನ್ನು ಈ ಪ್ರಕರಣಕ್ಕಾಗಿ ಸುಳ್ಳು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ.

ಆರೋಪಿತರ ಅಂತ ಶೋಧನೆ ಮಾಡುವ ಪೂರ್ವದಲ್ಲಿ ನನ್ನ ಹಾಗೂ ನನ್ನ ಸಿಬ್ಬಂದಿಯವರ ಅಂಗ ಶೋದನೆ ಮಾಡಿರಲಿಲ್ಲ. 2ನೇ ಆರೊಪಿ ಕೃಷ್ಣನ ಬಳಿಯಲ್ಲಿ ಯಾವುದೇ ಬಂಗಾರದ ಚೈನ್ ಇದ್ದಿರಲೇ ಇಲ್ಲ ಎಂದರೆ ಸರಿಯಲ್ಲ. ನಿಪಿ-35 ಮಹಜರ್‌ನ ಸಾಕ್ಷೀದಾರರಿಗೆ ಮುಂಚಿತವಾಗಿ ಲಿಖಿತ ನೋಟೀಸ್ ಕೊಟ್ಟಿರಲಿಲ್ಲ. ನಿಪಿ-35 ಮಹಜರ್ ಯಾರು ಬರೆದಿರುವರು ಅನ್ನುವುದರ ಕುರಿತು ಸಂಬಂಧಪಟ್ಟ ವ್ಯಕ್ತಿಯ ಸಹಿ ಹಾಗೂ ಹಿಂಬರಹ ಇರುವುದಿಲ್ಲ ಎಂದರೆ ಸರಿ. ನಿಪಿ-35 ರಲ್ಲಿ ಬಂಗಾರದ ಚೈನ್‌ನ ಸಂಪೂರ್ಣ ವಿವರ ಅಂದರೆ ಅದರ ತೂಕ, ಚೈನ್‌ನ ಮಾಡೆಲ್ ಹಾಗೂ ಡಿಸೈನ್ ಕಾಣಿಸಿಲ್ಲ ಎಂದರೆ ಸರಿಯಲ್ಲ. ನಿಪಿ-35 ರಲ್ಲಿ ವಶಪಡಿಸಿಕೊಂಡ ಚಿನ್ನದ ಚೈನ್‌ನ ಫೋಟೋ ಹಾಜರುಪಡಿಸಿಲ್ಲ ಎಂದರೆ ಸರಿ. ನಿಪಿ-35 ರಲ್ಲಿನ ಚಿನ್ನದ ಚೈನ್‌ನನ್ನು ತೂಕ ಮಾಡಿದ ಅಕ್ಕಸಾಲಿಗನನ್ನು ಈ ಪ್ರಕರಣದಲ್ಲಿ ಸಾಕ್ಷೀದಾರನನ್ನಾಗಿ ಕಾಣಿಸಿಲ್ಲ. ಸದರಿ ಅಕ್ಕಸಾಲಿಗನ ಹೆಸರು ನನಗೆ ಈಗ ನೆನಪಿಲ್ಲ. ಸದರಿ ಅಕ್ಕಸಾಲಿಗನ ಸಹಿ ನಿಪಿ-35 ರಲ್ಲಿ ಇರುವುದಿಲ್ಲ.

ಈ ಪ್ರಕರಣದಲ್ಲಿನ ಯಾವುದೇ ಆರೋಪಿತರು ನನ್ನ ಮುಂದೆ ನಿಪಿ-37 ರಿಂದ 41 ರಲ್ಲಿ ಕಾಣಿಸಿದಂತೆ ಯೊವುದೇ ಸ್ವಇಚ್ಚಾ ಹೇಳಿಕೆಗಳನ್ನು ನೀಡಿರುವುದೇ ಇಲ್ಲ ಎಂದರೆ ಸರಿಯಲ್ಲ. ಸದರಿ ಸ್ವಇಚ್ಚಾ ಹೇಳಿಕೆಗಳನ್ನು ಪ್ರಕರಣದ ಅನುಕೂಲಕ್ಕಾಗಿ ಸುಳ್ಳು ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ.

ನಾನು ನನ್ನ ಸಾಕ್ಷ್ಯ ಮುಖ್ಯ ವಿಚಾರಣೆಯಲ್ಲಿ ಹೇಳಿದ ರಘು ಮತ್ತು ಸಂತೋಷ್ ಇವರು ನನ್ನ ಸಮಕ್ಷಮ ಯಾವುದೇ ಹೇಳಿಕೆಗಳನ್ನು ನೀಡಿರುವುದೇ ಇಲ್ಲ, ಸದರಿಯವರು ಯಾವುದೇ ಆರೋಪಿತರನ್ನು ಠಾಣೆಗೆ ಬಂದು ಗುರುತಿಸಿರುವುದೇ ಇಲ್ಲ ಹಾಗೂ ರಘು ಮತ್ತು ಸಂತೋಷ್ ರವರ ಹೇಳಿಕೆಗಳನ್ನು ಈ ಪ್ರಕರಣಕ್ಕಾಗಿ ಸುಳ್ಳು ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ಸದರಿಯವರಿಗೆ ಠಾಣೆಗೆ ಬರಲು ಲಿಖಿತ ನೋಟೀಸ್ ಕೊಟ್ಟಿರಲಿಲ್ಲ. ದಿನಾಂಕ 26.02.2014 ರಂದು ಸದರಿ ರಘು ಮತ್ತು ಸಂತೋಷ್ ಇವರುಗಳ ಹೇಳಿಕೆಗಳನ್ನು ಪಡೆದಿದ್ದರ ಕುರಿತು ಕೇಸ್ ಡೈರಿಯಲ್ಲಿ ನಮೂದಿಸಿದ್ದೇನೆ. ಸದರಿ ಡೈರಿಯ ಪ್ರತಿಯನ್ನು ತನಿಖಾದಿಕಾರಿಗೆ ಪೂರೈಸಿರುತ್ತೇನೆ.

ದಿನಾಂಕ 01.03.2014 ರಂದು ಪಿ ಸಿ ಜಯರಾಂ ಹಾಗೂ ಗಂಗಾಧರ್ ನನ್ನ ಮುಂದೆ ಯಾವುದೇ ಆರೋಪಿತರನ್ನು ಹಾಜರುಪಡಿಸಿರಲೇ ಇಲ್ಲ ಹಾಗೂ ಸದರಿಯವರು ಯಾವುದೇ ಹೇಳಿಕೆಗಳನ್ನು ನನ್ನ ಮುಂದೆ ನೀಡಿರಲೇ ಇಲ್ಲ ಎಂದರೆ ಸರಿಯಲ್ಲ.

ದಿನಾಂಕ 02.03.2014 ರಂದು ದಾಬಾಸ್‌ಪೇಟೆ ಪೋಲೀಸ್ ಠಾಣೆ ಮೊಕದ್ದಮೆ ಸಂಖ್ಯೆ 35 / 14 ಕ್ಕೆ ಸಂಬಂಧಪಟ್ಟಂತೆ ದಾಬಸ್‌ಪೇಟೆ ಟೌನ್ ಹೆಚ್ ಡಿ ಎಫ್ ಸಿ ಬ್ಯಾಂಕ್ ಎ ಟಿ ಎಂ ನಲ್ಲಿ ಹಣ ಡ್ರಾ ಮಾಡಿದ ಬಗ್ಗೆ ಆರೋಪಿತರು ತಿಳಿಸಿದ್ದರು ಅಂತ ಮತ್ತು ಆ ಕುರಿತು ಸದರಿ ಸ್ಥಳಕ್ಕೆ ಆರೋಪಿತರೊಂದಿಗೆ ಹೋಗಿ ಪಂಚರಾದ ವೆಂಕಟಾಚಲಯ್ಯ ಮತ್ತು ಮಂಜು ಬಿನ್ ಗಂಗಯ್ಯ, ಮಜುನಾಥ ಬಿನ್ ರಾಜಶೇಖರಯ್ಯ ಇವರ ಸಮಕ್ಷಮ ಮಹಜರ್ ಜರುಗಿಸಿದೆನು ಅಂತ ಸುಳ್ಳು ಹೇಳಿರುತ್ತೆನೆ ಎಂದರೆ ಸರಿಯಲ್ಲ. ಸದರಿ ಮಹಜರ್‌ನ್ನು ಠಾಣೆಯಲ್ಲಿ ಸುಳ್ಳು ಸೃಷ್ಟಿಸಿದ್ದೆನು ಎಂದರೆ ಸರಿಯಲ್ಲ. ಸದರಿ ಮಹಜರ್‌ನ ಪಂಚ ಸಾಕ್ಷೀದಾರರಿಗೆ ಮುಂಚಿತ ಲಿಖಿತ ನೋಟೀಸ್ ಕೊಟ್ಟಿರಲಿಲ್ಲ.

ಪಂಚರಾದ ವೆಂಕಟಾಚಲಯ್ಯ ಮತ್ತು ಮಂಜು ಬಿನ್ ಗಂಗಯ್ಯ, ಮಂಜುನಾಥ ಬಿನ್ ರಾಜಶೇಖರಯ್ಯ ಇವರುಗಳು ನಮ್ಮ ಠಾಣೆಯ ಖಾಯಂ ಪಂಚ ಸಾಕ್ಷೀದಾರರು ಎಂದರೆ ಸರಿಯಲ್ಲ.

ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಸಂಗತಿಗಳನ್ನು ಅಂದರೆ ದಿನಾಂಕ 02.03.2014 ರಂದು ನೆಲಮಂಗಲ ತಾಲ್ಲೂಕು ಸೋಮಪುರ ಹೋಬಳಿ ಹಳೇ ನಿಜಗಲ್ ಗೇಟಿನ ಬಳಿ ಇರುವ ಮಲ್ಲಿಕಾರ್ಜುನಯ್ಯನವರ ಜಮೀನಿನ ಪಕ್ಕದಲ್ಲಿ ಹಾದು ಹೋಗಿರುವ ಬೆಂಗಳೂರು– ತುಮಕೂರು ಎನ್ ಹೆಚ್-4 ರಸ್ತೆ ಬದಿಯಲ್ಲಿರುವ ಬಸ್ ಶೆಲ್ಟರ್ ಬಳಿ ನಮ್ಮನ್ನು ಮತ್ತು ಪಂಚ ಸಾಕ್ಷೀದಾರರಾದ ಮಂಜುನಾಥ ಬಿನ್ ರಾಜಶೇಖರಯ್ಯ, ಲೋಕೇಶ್ ಬಿನ್ ಶಂಕರಪ್ಪ, ಮಂಜುನಾಥ ಬಿನ್ ಗಂಗಯ್ಯ ಇವರುಗಳನ್ನು ಕೃತ್ಯವೆಸಗಿದ ಸ್ಥಳಕ್ಕೆ ಕರೆದುಕೊಂಡು ಹೋದರು ಅಂತ , ಸದರಿ ಸ್ಥಳ ಪರಿಶೀಲನೆ ಮಾಡಿದೆನು ಅಂತ, ನಂತರ ಆರೋಪಿತರು ಕೃತ್ಯಕ್ಕೆ ಬಳಸಿದ ರಾಡು ಮತ್ತು ಮೂರು ಬ್ಲೇಡುಗಳನ್ನು ಕೃತ್ಯ ನಡೆಸಿದ ಸ್ಥಳದಿಂದ ದಕ್ಷಿಣ ದಿಕ್ಕಿಗೆ ಸುಮಾರು 90 ಮೀಟರ್ ದೂರ ಹೋಗಿ ಸದರಿ ಸ್ಥಳದಲ್ಲಿಯೇ ಲಾರಿ ಚಾಲಕನಿಗೆ ಹೊಡೆದು ಆತನ ಮೈಮೇಲಿದ್ದ ಬಟ್ಟೆಗಳಿಂದಲೇ ಆತನ ಕೈ ಕಾಲುಗಳನ್ನು ಕಟ್ಟಿ ಹಾಕಿದ ಸ್ಥಳ ಎಂದು ತೋರಿಸಿದರು ಅಂತ, ಸದರಿ ಸ್ಥಳದಲ್ಲಿ ರಕ್ತ ಬಿದ್ದು ಒಣಗಿದ ನಿಶಾನೆ ಕಂಡು ಬಂದಿತ್ತು ಅಂತ , ಸದರಿ ಸ್ಥಳದಿಂದ 18 ಮೀಟರ್ ಅಂತರದಲ್ಲಿ ರೈಲ್ವೆ ಹಳಿ ಇತ್ತು ಅಂತ , ಸದರಿ ಸ್ಥಳದಿಂದ 30 ಮೀಟರ್ ಅಂತರದಲ್ಲಿ ರೈಲ್ವೆ ಹಳಿ ಕ್ರಾಸಿಂಗ್ ಇತ್ತು ಅಂತ, ಕೃತ್ಯ ನಡೆದ ಸ್ಥಳದಿಂದ ಉತ್ತರದ ಕಡೆಗೆ 25 ಅಡಿ ದೂರದಲ್ಲಿರುವ ಹುಲ್ಲಿನ ಪೊದೆಯಲ್ಲಿ ಚಾಲಕನಿಗೆ ಹೊಡೆದು ಕೊಯ್ದು ಬಿಸಾಕಿದ ರಾಡು ಮತ್ತು ಮೂರು ಬ್ಲೇಡ್‌ಗಳನ್ನು ಆರೋಪಿತರ ಪೈಕಿ ಚಂದು ರಾಥೋಡ್ ಮತ್ತು ರಾಜೇಶ್ ಎತ್ತಿ ಕೊಟ್ಟರು ಅಂತ, ಅವುಗಳನ್ನು ಬಿಳಿ ಚೀಲಗಳಲ್ಲಿ ಪ್ರತ್ಯೇಕವಾಗಿ ಹಾಕಿ

“ಎ” ಎಂಬ ಅಕ್ಷರದಿಂದ ಸೀಲು ಮಾಡಿ ಮುಂದಿನ ತನಿಖೆಗಾಗಿ ಅಮಾನತ್ತುಪಡಿಸಿಕೊಂಡೆನು ಅಂತ ಹಾಗೂ ಈ ಕುರಿತು ನಿಪಿ-25 ರಲ್ಲಿ ಕಾಣಿಸಿದಂತೆ ರನ್ನಿಂಗ್ ಮಹಜರ್ ಬರೆದು ಪಂಚರ ಸಹಿ ಪಡೆದುಕೊಂಡೆನು ಅಂತ ಎಲ್ಲವನ್ನೂ ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ.

ನಿಪಿ-25 ಮಹಜರ್‌ನ ಪಂಚ ಸಾಕ್ಷೀದಾರರಿಗೆ ಮುಂಚಿತ ಲಿಖಿತ ನೋಟೀಸ್ ಕೊಟ್ಟಿರಲಿಲ್ಲ. ನಿಪಿ-25 ರಲ್ಲಿ ಕಾಣಿಸಿದ ಮಲ್ಲಿಕಾರ್ಜುನಯ್ಯನ ಹೇಳಿಕೆಯನ್ನು ನಿಪಿ-25 ಮಹಜರ್‌ಗೆ ಸಂಬಂಧಪಟ್ಟಂತೆ ಪಡೆದುಕೊಂಡಿಲ್ಲ.

ಮು ಮಾ 6 ರಿಂದ 8 ಇವುಗಳು ಸಾಮಾನ್ಯವಾಗಿ ಮಾರುಕಟ್ಟೆಯಲ್ಲಿ ಸಿಗುವ ಸಾದ್ಯತೆ ಇದೆ ಎಂದರೆ ಸರಿ. ನಿಪಿ-25 ಮಹಜರ್ ಯಾರು ಬರೆದಿದ್ದಾರೆ ಅನ್ನುವುದರ ಕುರಿತು ಅದರಲ್ಲಿ ಹಿಂಬರಹ ಹಾಗೂ ಸಂಬಧಪಟ್ಟ ವ್ಯಕ್ತಿಯ ಸಹಿ ಇರುವುದಿಲ್ಲ ಎಂದರೆ ಸರಿಯಲ್ಲ, ನಿಪಿ-25 ರಲ್ಲಿ ಕಾಣಿಸಿದಂತೆ ವಾಸ್ತವಿಕವಾಗಿ ಪಂಚರ ಸಮಕ್ಷಮ ಮಹಜರ್ ಮಾಡಿರುವುದೇ ಇಲ್ಲ ಮತ್ತು ಏನನ್ನೂ ಅಮಾನತ್ತುಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-25ನ್ನು ಠಾಣೆಯಲ್ಲಿ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ಮು.ಮಾ 6 ರಿಂದ 8 ಇವುಗಳನ್ನು ಆರೋಪಿತರು ಹಾಜರುಪಡಿಸಿರುವುದೇ ಇಲ್ಲ ಎಂದರೆ ಸರಿಯಲ್ಲ.

ನಿಪಿ-25 ರಲ್ಲಿ ಮು ಮಾ 6 ರಿಂದ 8 ಇವುಗಳ ಸಂಪೂರ್ಣ ವರ್ಣನೆ ಅಂದರೆ ಅವುಗಳ ಉದ್ದ ಮತ್ತು ಅಗಲ ಕಾಣಿಸಿಲ್ಲ ಎಂದರೆ ಸರಿಯಲ್ಲ.

ದಿನಾಂಕ 02.03.2014 ರಂದು ನಿಪಿ-25 ಮಹಜರ್ ಪಂಚ ಸಾಕ್ಷೀದಾರರು ನನ್ನ ಸಮಕ್ಷಮ ಯಾವುದೇ ಹೇಳಿಕೆಗಳನ್ನು ನೀಡಿರಲಿಲ್ಲ ಎಂದರೆ ಸರಿಯಲ್ಲ, ಸದರಿ ಹೇಳಿಕೆಗಳನ್ನು ಈ ಪ್ರಕರಣಕ್ಕಾಗಿ ಸುಳ್ಳು ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ.

ಈ ಪ್ರಕರಣದಲ್ಲಿನ ಅಪರಾಧಕ್ಕೂ ಹಾಗೂ ಆರೋಪಿತರಿಗೂ ಯಾವುದೇ ಸಂಬಂಧ ಇರುವುದೇ ಇಲ್ಲ ಎಂದರೆ ಸರಿಯಲ್ಲ. ನಾನು ಆರೋಪಿತರ ವಿರುದ್ದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು 4 ಮತ್ತು 5ನೇ ಆರೋಪಿತರ ಪರ ಶ್ರೀ ಜಿ ಎಸ್ ಬಿ ವಕೀಲರಿಂದಃ-**

**(**ಈ ಹಂತದಲ್ಲಿ ಶ್ರೀ ಜಿ ಎಸ್ ಬಿ ವಕಿಲರು , ಸದರಿ ಸಾಕ್ಷಿಗೆ 1ನೇ ಆರೋಪಿ ಪರ ವಕೀಲರು ಮಾಡಿರುವ ಪಾಟೀ ಸವಾಲಿನಂತೆ 4 ಮತ್ತು 5 ನೇ ಆರೋಪಿತರ ಪರ ಮಾಡಿದ ಪಾಟೀ ಸವಾಲು ಇದೆ ಎಂದು ಪರಿಗಣಿಸಲು ಕೇಳಿಕೊಂಡಿರುತ್ತಾರೆ.**)**

**ಪಾಟೀ ಸವಾಲು 6ನೇ ಆರೋಪಿ ಪರ ವಕೀಲರಿಂದಃ**

**(**ಈ ಹಂತದಲ್ಲಿ ಶ್ರೀ ಎಸ್ ವೈ ವಕಿಲರು , ಸದರಿ ಸಾಕ್ಷಿಗೆ 1ನೇ ಆರೋಪಿ ಪರ ವಕೀಲರು ಮಾಡಿರುವ ಪಾಟೀ ಸವಾಲಿನಂತೆ 6 ನೇ ಆರೋಪಿ ಪರ ಮಾಡಿದ ಪಾಟೀ ಸವಾಲು ಇದೆ ಎಂದು ಪರಿಗಣಿಸಲು ಕೇಳಿಕೊಂಡಿರುತ್ತಾರೆ.**)**

**ಪಾಟೀ ಸವಾಲು 2ನೇ ಆರೋಪಿ ಪರ ಶ್ರೀ ಬಿ ಟಿ ಎಂ ವಕೀಲರಿಂದ ಃ**

ಖಾನಿಮಠದ ಕ್ರಾಸ್‌ಗೆ ಹೋಗಿ ಭೇಟಿ ಮಾಡಿಲ್ಲ ಮತ್ತು ಅಲ್ಲಿ ಯಾವುದೇ ಸ್ಥಳ ಮಹಜರ್ ಜರುಗಿಸಿಲ್ಲ. ಯಾವುದೇ ಆರೋಪಿತರನ್ನು ಖಾನಿಮಠದ ಕ್ರಾಸ್ ಬಳಿಯಿಂದ ಸಿಬ್ಬಂದಿಯವರು ಹಿಡಿದು ಕೊಂಡು ಬಂದಿರಲಿಲ್ಲ ಎಂದರೆ ಸರಿಯಲ್ಲ.

ನಿಪಿ-24 ಫೋಟೋದಲ್ಲಿ ಕಂಡು ಬರುವ ಪೈಪು ಇದರ ಕುರಿತು ನಿಪಿ-33 ಮಹಜರ್‌ನಲ್ಲಿ ಕಾಣಿಸಿಲ್ಲ ಎಂದರೆ ಸರಿಯಲ್ಲ. ನಾನು ಈ ಸಂಗತಿಯನ್ನು ಸುಳ್ಳು

ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-24 ಫೋಟೋದಲ್ಲಿ ಕಂಡು ಬರುವ ಸ್ಪ್ಯಾನರ್ ವೀಲ್ ಸ್ಪ್ಯಾನರ್ ಅಲ್ಲ ಮತ್ತು ಅದು ಜನರಲ್ ಸ್ಪ್ಯಾನರ್ ಎಂದರೆ ಸರಿಯಲ್ಲ. ನಿಪಿ-24 ರಲ್ಲಿ ಕಂಡು ಬರುವಂತಹ ನಾನು ಕಬ್ಬಿಣದ ರಾಡುಗಳೆಂದು ಹೇಳುವಂತವುಗಳು ಇವು ಶಾಮಿಯಾನ್ ಅಥವಾ ಟೆಂಟ್ ಹೊಡೆಯಲು ಉಪಯೋಗಿಸುವ ದೊಡ್ಡ ಮೊಳೆಗಳು ಎಂದರೆ ಸರಿಯಲ್ಲ. ನಿಪಿ-22 ಮತ್ತು 23 ರಲ್ಲಿ ಕಂಡು ಬರುವ ಸ್ಕೂಟರ್ ಬಗೆಗೆ ನಾನು ತನಿಖೆ ಮಾಡಿಲ್ಲ ಎಂದರೆ ಸರಿಯಲ್ಲ. 2ನೇ ಆರೋಪಿ ಕೃಷ್ಣನಿಂದ ಯಾವುದೇ ಮುದ್ದೆ ಮಾಲುಗಳನ್ನು ಹಾಗೂ ಯಾವುದೇ ಆಯುಧಗಳನ್ನು ವಶಪಡಿಸಿಕೊಂಡಿರಲಿಲ್ಲ ಎಂದರೆ ಸರಿಯಲ್ಲ. ನಿಪಿ-34 ಪಿ.ಎಫ್‌ನಲ್ಲಿ ಕಾಣಿಸಿದ ಮುದ್ದೆ ಮಾಲುಗಳನ್ನು ಯಾರಿಂದ ವಶಪಡಿಸಿಕೊಳ್ಳಲಾಗಿದೆ ಎನ್ನುವುದನ್ನು ಕಾಣಿಸಿಲ್ಲ ಎಂದರೆ ಸರಿಯಲ್ಲ.

1ನೇ ಆರೋಪಿ ರಾಜೇಶ್ ಮತ್ತು 2ನೇ ಆರೋಪಿ ಕೃಷ್ಣ ಇವರ ಸ್ವಇಚ್ಛಾ ಹೇಳಿಕೆಗಳನ್ನು ಕಂಪ್ಯೂಟರ್‌ನಲ್ಲಿ ಟೈಪ್ ಮಾಡಿಸಲಾಗಿದೆ. 1ನೇ ಆರೋಪಿ ರಾಜೇಶ್ ಮತ್ತು 2ನೇ ಆರೋಪಿ ಕೃಷ್ಣ ಇವರುಗಳು ನನ್ನ ಮುಂದೆ ಸ್ವಇಚ್ಛಾ ಹೇಳಿಕೆಗಳನ್ನು ಕೊಟ್ಟಿರುವುದೇ ಇಲ್ಲ ಎಂದರೆ ಸರಿಯಲ್ಲ.

3 ಮತ್ತು 4ನೇ ಆರೋಪಿತರನ್ನು ನಾನೇ ಅರೆಸ್ಟ್ ಮಾಡಿರುತ್ತೇನೆ. ಸದರಿ ಅರೋಪಿತರನ್ನು ಎಷ್ಟು ಗಂಟೆಗೆ ಅರೆಸ್ಟ್ ಮಾಡಿರುತ್ತೇನೆ ಅನ್ನುವುದು ಈಗ ನೆನಪಿಲ್ಲ. ದೊಡ್ಡಬೆಳವಂಗಲ ಪೋಲೀಸ್ ಠಾಣೆಯಿಂದ ನೆಲಮಂಗಲದ ಹುಣಸೇಮರದ ಕ್ರಾಸ್ ಸುಮಾರು 20 ರಿಂದ 25 ಕಿ.ಮಿ ದೂರ ಇರಬಹುದು.

3 ಮತ್ತು 4ನೇ ಆರೋಪಿತರನ್ನು ಅರೆಸ್ಟ್ ಮಾಡುವಾಗ ಅವರು ಒಂದೇ ಸ್ಥಳದಲ್ಲ ಇದ್ದರು. 3 ಮತ್ತು 4ನೇ ಆರೋಪಿತರನ್ನು ನೆಲಮಂಗಲದ ಕ್ರಾಸ್ ಬಳಿ ಅರೆಸ್ಟ್ ಮಾಡಿರುವುದಿಲ್ಲ ಹಾಗೂ ಅವರನ್ನು ಠಾಣೆಗೆ ಕರೆತಂದಿರುವುದಿಲ್ಲ ಎಂದರೆ ಸರಿಯಲ್ಲ.

ನಾನು ಸದರಿ ಸ್ಥಳಕ್ಕೆ ಹೋಗಿರಲೇ ಇಲ್ಲ ಎಂದರೆ ಸರಿಯಲ್ಲ. ಸದರಿ ಆರೋಪಿತರು ನನ್ನ ಮುಂದೆ ಯಾವುದೇ ಸ್ವಇಚ್ಛಾ ಹೇಳಿಕೆಗಳನ್ನು ಕೊಟ್ಟಿರುವುದೇ ಇಲ್ಲ ಎಂದರೆ ಸರಿಯಲ್ಲ.

2ನೇ ಆರೋಪಿತನಿಂದ ಯಾವುದೇ ಮುದ್ದೆ ಮಾಲುಗಳನ್ನು ವಶಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. 2ನೇ ಆರೋಪಿತನನ್ನು ದಿನಾಂಕ 24.02.2014 ರಂದು ಖಾನಿಮಠದ ಕ್ರಾಸ್ ಬಳಿಯಿಂದ ಸಿಬ್ಬಂದಿಯವರು ಕರೆದುಕೊಂಡು ಬಂದು ನನ್ನ ಮುಂದೆ ಹಾಜರುಪಡಿಸಿರಲಿಲ್ಲ ಎಂದರೆ ಸರಿಯಲ್ಲ.

ದಾಬಸ್‌ಪೇಟೆ ಕ್ರೈಂ ನಂ. 36/2014 ರಲ್ಲಿನ ಅಪರಾಧಕ್ಕೆ ಸಂಬಂಧಿಸಿದಂತೆ ಈ ಪ್ರಕರಣದಲ್ಲಿನ ಆರೋಪಿತರನ್ನು ಫಿಕ್ಸ್ ಮಾಡಲು ಸದರಿ ಆರೋಪಿತರನ್ನು ಅರೆಸ್ಟ್ ಮಾಡಿ ಸುಳ್ಳು ಪ್ರಕರಣ ದಾಖಲಿಸಿಕೊಂಡು ಅದಕ್ಕೆ ಪೂರಕವಾಗುವಂತೆ ಸುಳ್ಳು ದಾಖಲಾತಿ ಸೃಷ್ಟಿಸಿ ಸುಳ್ಳು ಸಾಕ್ಷಿ ಹೇಳಿರುತ್ತೇನೆ ಎಂದರೆ ಸರಿಯಲ್ಲ.

## ಮರು ವಿಚಾರಣೆ ಸರ್ಕಾರಿ ಅಭಿಯೋಜಕರಿಂದಃ-

ಆರೋಪಿಗಳು ಗುನ್ನೆ ಜಾಗೆಗಳನ್ನು ತೋರಿಸಿದ ಸ್ಥಳಗಳ ಕುರಿತು ವಿಡಿಯೋ ಮಾಡಿದ್ದು ಸದರಿ ಎರಡು ವೀಡಿಯೋ ಸೀಡಿಗಳನ್ನು ದಾಬಸ್‌ಪೇಟೆ ಕ್ರೈಂ ನಂಬರ್ 36 / 14 ರಲ್ಲಿನ ತನಿಖಾಧಿಕಾರಿಗಳಿಗೆ ವರ್ಗಾಯಿಸಿರುತ್ತೇನೆ.

ನಿಪಿ-35 ರ ಅಡಿ ವಶಪಡಿಸಿಕೊಂಡ ಬಂಗಾರದ ಚೈನ್ ಈ ಪ್ರಕರಣಕ್ಕೆ ಸಂಬಂಧಪಡದಿದ್ದ ಕಾರಣ ಅದನ್ನು ಮುಂದಿನ ತನಿಖಾಧಿಕಾರಿಗಳಿಗೆ ವರ್ಗಾಯಿಸಿಲ್ಲ.

## ಮರು ಪಾಟೀ ಸವಾಲು ಆರೋಪಿತರ ಪರ ವಕೀಲರಿಂದ ಃ

ಏನೂ ಇಲ್ಲ.

{ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.}
ಓ ಹೇ ಸಾ ಸ ಸಹಿ ಮಾಡಿದ್ದಾರೆ.

1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು